# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ :** **105**

**ಸದಸ್ಯರ ಹೆಸರು :** **ಶ್ರೀ ಸುನೀಲ್ ಯ ವಲ್ಯಾಪುರೆ**
**[ವಿಧಾನಸಭೆಯಿಂದ ಚುನಾಯಿತರಾದವರು]**

**ಉತ್ತರಿಸುವ ದಿನಾಂಕ :** **14.02.2024**

**ಉತ್ತರಿಸುವ ಸಚಿವರು :** **ಕಂದಾಯ ಸಚಿವರು**

| | ಪ್ರಶ್ನೆ | ಉತ್ತರ |
|---|---|---|
| (ಅ) | ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರಡಿ ವ್ಯಕ್ತಿ/ಕುಟುಂಬ, ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕೆ ಸಂಸ್ಥೆಗಳು ಭೂಮಿಯನ್ನು ಹೊಂದಲು ನಿಗದಿಪಡಿಸಿರುವ ಗರಿಷ್ಠ ಮಿತಿಯೆಷ್ಟು; | ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 63ರನ್ವಯ ವ್ಯಕ್ತಿ/ಕುಟುಂಬ ಅಂದರೆ ಒಬ್ಬ ವ್ಯಕ್ತಿ ಅಥವಾ ಐದು ಜನ ಹೊಂದಿರುವ ಕುಟುಂಬ ಒಟ್ಟು 10 ಯುನಿಟ್ [54-00 ಎಕರೆ] ಜಮೀನನ್ನು ಮಾತ್ರ ಹೊಂದಬಹುದು. ಒಂದು ವೇಳೆ ಐದಕ್ಕಿಂತ ಹೆಚ್ಚು ಜನ ಸದಸ್ಯರನ್ನು ಹೊಂದಿರುವ ಕುಟುಂಬದ ಸಂದರ್ಭದಲ್ಲಿ ಪ್ರತಿಯೊಬ್ಬರಿಗೂ 02 ಯುನಿಟ್ ಹೆಚ್ಚಿರತಕ್ಕದ್ದು. ಅದು ಗರಿಷ್ಠ 20 ಯುನಿಟ್ [108-00 ಎಕರೆ] ಮೀರತಕ್ಕದ್ದಲ್ಲ.<br><br>ಮುಂದುವರೆದು, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 63 ರನ್ವಯ ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕೆ ಸಂಸ್ಥೆಗಳು 20 ಯುನಿಟ್ [108-00 ಎಕರೆ] ಜಮೀನನ್ನು ಹೊಂದಬಹುದು.<br><br>[1 ಯುನಿಟ್ = 5.4 ಎಕರೆ] |
| (ಆ) | ಗರಿಷ್ಠ ಮಿತಿಗಿಂತ ಹೆಚ್ಚಿನ ಜಮೀನನ್ನು ಖರೀದಿ ಮಾಡಬೇಕಾಗಿದ್ದಲ್ಲಿ ಕಲಂ 109ರಡಿ ಅನುಮತಿ ಪಡೆಯುವುದು ಕಡ್ಡಾಯವಾಗಿದೆಯೇ; | ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 63ರನ್ವಯ ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕೆ ಸಂಸ್ಥೆಗಳು 20 ಯುನಿಟ್‌ವರೆಗೆ [108-00 ಎಕರೆ] ಜಮೀನನ್ನು ಹೊಂದಬಹುದು. ಒಂದು ವೇಳೆ ಗರಿಷ್ಠ ಮಿತಿ ಮೀರಿದ್ದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ: ಆರ್‌ಡಿ 74 ಎಲ್‌ಆರ್‌ಎ 2021 ದಿನಾಂಕ: 11.01.2022 ರಲ್ಲಿ ತಿಳಿಸಿರುವಂತೆ ಕಡ್ಡಾಯವಾಗಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 109ರಡಿ ಅನುಮತಿ ಪಡೆಯಬೇಕಾಗುತ್ತದೆ. |

| | | |
|---|---|---|
| (ಇ) | ಕಳೆದ 2 ವರ್ಷಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 109ರಡಿ ಅನುಮತಿ ಪಡೆದು ಎಷ್ಟು ಎಕರೆ ಜಮೀನು ಖರೀದಿಸಲಾಗಿದೆ; | **ಅನುಬಂಧದಲ್ಲಿ ಲಗತ್ತಿಸಿದೆ.** |
| (ಈ) | ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕೆ ಸಂಸ್ಥೆಗಳು ಗರಿಷ್ಠ ಮಿತಿಗಿಂತ ಹೆಚ್ಚಿನ ಜಮೀನನ್ನು ನಿಯಮ ಬಾಹಿರವಾಗಿ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು? | ಈ ರೀತಿಯ ಪ್ರಕರಣಗಳು ಕಂಡು ಬಂದಿರುವುದಿಲ್ಲ. |

**ಸಂಖ್ಯೆ: ಆರ್‌ಡಿ 03 ಎಲ್‌ಆರ್‌ಎಸ್ 2024**

**[ಕೃಷ್ಣ ಬೈರೇಗೌಡ]**
**ಕಂದಾಯ ಸಚಿವರು.**

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ಯ ವಲ್ಯಾಪುರೆ [ವಿಧಾನ ಸಭೆಯಿಂದ ಚುನಾಯಿತರಾದವರು] ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 105ಕ್ಕೆ ಅನುಬಂಧ**

| ಕ್ರಮ ಸಂಖ್ಯೆ | ಜಿಲ್ಲೆ | ಕಳೆದ 2 ವರ್ಷಗಳಲ್ಲಿ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 109ರಡಿ ಅನುಮತಿ ನೀಡಿರುವ ಜಮೀನಿನ ವಿಸ್ತೀರ್ಣ [ಎಕರೆ/ಗುಂಟೆ/ಆಣೆ] |
|---|---|---|
| 1 | ಬೆಂಗಳೂರು ನಗರ | - |
| 2 | ಬೆಂಗಳೂರು ಗ್ರಾಮಾಂತರ | - |
| 3 | ಕೋಲಾರ | - |
| 4 | ಶಿವಮೊಗ್ಗ | - |
| 5 | ಚಿತ್ರದುರ್ಗ | - |
| 6 | ಚಿಕ್ಕಬಳ್ಳಾಪುರ | **20-29** |
| 7 | ತುಮಕೂರು | - |
| 8 | ರಾಮನಗರ | - |
| 9 | ದಾವಣಗೆರೆ | - |
| 10 | ಮೈಸೂರು | - |
| 11 | ಚಾಮರಾಜನಗರ | - |
| 12 | ಚಿಕ್ಕಮಗಳೂರು | - |
| 13 | ದಕ್ಷಿಣ ಕನ್ನಡ | - |
| 14 | ಕೊಡಗು | - |
| 15 | ಹಾಸನ | - |
| 16 | ಮಂಡ್ಯ | - |
| 17 | ಉಡುಪಿ | - |
| 18 | ಬೆಳಗಾವಿ | - |
| 19 | ವಿಜಯಪುರ | - |
| 20 | ಬಾಗಲಕೋಟೆ | - |
| 21 | ಧಾರವಾಡ | - |
| 22 | ಗದಗ | - |
| 23 | ಹಾವೇರಿ | **97-04** |
| 24 | ಉತ್ತರ ಕನ್ನಡ ಜಿಲ್ಲೆ | - |
| 25 | ಬಳ್ಳಾರಿ | - |
| 26 | ಬೀದರ್ | - |
| 27 | ಕಲಬುರಗಿ | - |
| 28 | ಕೊಪ್ಪಳ | **6-28** |
| 29 | ರಾಯಚೂರು | - |
| 30 | ಯಾದಗಿರಿ | - |
| 31 | ವಿಜಯನಗರ | - |

* * *

**ಮಾನ್ಯ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಸುನೀಲ್ ಯ ವಲ್ಯಾಪುರೆ [ವಿಧಾನಸಭೆಯಿಂದ ಚುನಾಯಿತರಾದವರು] ರವರ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 105ಕ್ಕೆ ಪೂರಕ ಟಿಪ್ಪಣಿ**

ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 63 ಈ ಕೆಳಕಂಡಂತಿರುತ್ತದೆ:-

**63. ಜಮೀನುಗಳ ಗರಿಷ್ಠ ಮಿತಿ** : (1) ಒಂದು ಕುಟುಂಬದವನಲ್ಲದ ಅಥವಾ ಯಾವುದೇ ಕುಟುಂಬವಿಲ್ಲದ ವ್ಯಕ್ತಿಗೂ ಮತ್ತು ಯಾವ ಕುಟುಂಬಕ್ಕೂ ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧ ಕಲ್ಪಿಸಿರುವಂತೆ ಹೊರತು ಭೂ ಮಾಲೀಕನಾಗಿ, ಜಮೀನುದಾರನಾಗಿ ಅಥವಾ ಗೇಣಿದಾರನಾಗಿ ಅಥವಾ ಭೋಗ್ಯ ಅಡಮಾನ ಪಡೆದವನಾಗಿ ಅಥವಾ ಅನ್ಯಥಾ ಅಥವಾ ಭಾಗಶ: ಒಂದು ಸಾಮರ್ಥ್ಯದಲ್ಲಿ ಮತ್ತು ಭಾಗಶ: ಇನ್ನೊಂದು ಸಾಮರ್ಥ್ಯದಲ್ಲಿ ಜಮೀನಿನ ಗರಿಷ್ಠ ಮಿತಿಗಿಂತಲೂ ಹೆಚ್ಚಿಗೆಯಾಗಿ ಭೂಮಿಯನ್ನು ಹೊಂದಿರಲು ಹಕ್ಕು ಇರತಕ್ಕದ್ದಲ್ಲ.

**(2) ಒಂದು ಕುಟುಂಬದವನಲ್ಲದ ಅಥವಾ ಯಾವ ಕುಟುಂಬವೂ ಇರದ ವ್ಯಕ್ತಿಯ ಅಥವಾ ಒಂದು ಕುಟುಂಬದ ಜಮೀನಿನ ಗರಿಷ್ಠ ಮಿತಿಯ ವಿಸ್ತೀರ್ಣವು ಹತ್ತು ಯುನಿಟ್‌ಗಳು ಆಗಿರತಕ್ಕದ್ದು [ಒಬ್ಬ ವ್ಯಕ್ತಿ ಅಥವಾ 05 ಜನ ಹೊಂದಿರುವ ಒಂದು ಕುಟುಂಬ 54-00 ಎಕರೆ ಮಾತ್ರ ಹೊಂದಿರತಕ್ಕದ್ದು. 01 ಯುನಿಟ್ = 5.4 ಎಕರೆ]**

**ಪರಂತು ಆದರೆ, ಐದಕ್ಕಿಂತ ಹೆಚ್ಚು ಜನ ಸದಸ್ಯರನ್ನು ಹೊಂದಿರುವ ಕುಟುಂಬದ ಸಂದರ್ಭದಲ್ಲಿ ಐದಕ್ಕಿಂತ ಹೆಚ್ಚಿನ ಪ್ರತಿಯೊಬ್ಬ ಸದಸ್ಯರಿಗೆ ಹೆಚ್ಚುವರಿಯಾಗಿ ಎರಡು ಯುನಿಟ್ ಗಳು ಆಗಿರತಕ್ಕದ್ದು. ಹೀಗಿದ್ದರೂ ಜಮೀನಿನ ಗರಿಷ್ಠ ಮಿತಿಯ ವಿಸ್ತೀರ್ಣವು ಒಟ್ಟಾಗಿ ಇಪ್ಪತ್ತು ಯುನಿಟ್‌ಗಳು ಮೀರತಕ್ಕದ್ದಲ್ಲ [ಒಂದು ಕುಟುಂಬದಲ್ಲಿ ಐದಕ್ಕಿಂತ ಹೆಚ್ಚು ಅಂದರೆ ಎಷ್ಟೇ ವ್ಯಕ್ತಿಗಳಿದ್ದರೂ ಗರಿಷ್ಠ 108-00 ಎಕರೆ ಮೀರತಕ್ಕದ್ದಲ್ಲ].**

**ಮುಂದುವರೆದು, ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 63(7)(ಎ) ರನ್ವಯ ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕೆ ಸಂಸ್ಥೆಗಳು 20 ಯುನಿಟ್‌ರವರೆಗೆ [108-00 ಎಕರೆ] ಮಾತ್ರ ಜಮೀನನ್ನು ಹೊಂದಲು ಅವಕಾಶ ಕಲ್ಪಿಸಲಾಗಿದೆ.**

* * *

ಕರ್ನಾಟಕ ಸರ್ಕಾರ

ಸಂಖ್ಯೆ: ಆರ್‌ಡಿ 74 ಎಲ್‌ಆರ್‌ಎ 2021

ಕರ್ನಾಟಕ ಸರ್ಕಾರ ಸಚಿವಾಲಯ
ಬಹುಮಹಡಿ ಕಟ್ಟಡ
ಬೆಂಗಳೂರು ದಿನಾಂಕ: 11.01.2022

## ಸುತ್ತೋಲೆ

ವಿಷಯ:- ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 54 ಶಾಸನ 2020 ದಿನಾಂಕ: 30.12.2021 ರಂತೆ ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳು ಕೃಷಿ ಜಮೀನನ್ನು ಖರೀದಿಸಲು ಅನುಸರಿಸಬೇಕಾದ ಕ್ರಮಗಳ ಕುರಿತು ಸ್ಪಷ್ಟೀಕರಣ.

* * *

ವ್ಯಕ್ತಿ/ಕುಟುಂಬ, ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ಕಲಂ 79ಎ, 79ಬಿ ಅನ್ನು ತೆಗೆದು ಹಾಕಿರುವುದರಿಂದ ಕೃಷಿ ಜಮೀನನ್ನು ಕೃಷಿಯೇತರ ಉದ್ದೇಶಗಳಿಗೆ ಖರೀದಿಸಲು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 109 ರಡಿ ಅನುಮತಿ ಅಗತ್ಯವಿದೆಯೇ ಎಂದು ಜಿಲ್ಲಾಧಿಕಾರಿಗಳು ಸ್ಪಷ್ಟನೆ ಕೋರಿದ್ದು,

ಹಾಗೂ

ವ್ಯಕ್ತಿ/ಕುಟುಂಬ, ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳು ಕೃಷಿಯೇತರ ಉದ್ದೇಶ ಹೊಂದಿ ಕೃಷಿ ಜಮೀನನ್ನು ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿರುವುದರಿಂದ ಸದರಿ ಜಮೀನುಗಳನ್ನು ನೋಂದಾಯಿಸಲು ಹಾಗೂ ಖಾತೆ ಮಾಡುವ ಸಲುವಾಗಿ ಈ ಕೆಳಗಿನಂತೆ ಸ್ಪಷ್ಟನೆ ನೀಡಲಾಗಿದೆ:-

ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 54 ಶಾಸನ 2020 ದಿನಾಂಕ: 30.12.2021 ರನ್ವಯ ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961 ಕಲಂ 79ಎ, 79ಬಿ, 79ಸಿ ಗಳನ್ನು ತೆಗೆದು ಹಾಕಲಾಗಿದೆ.

ವ್ಯಕ್ತಿ/ಕುಟುಂಬ, ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳು ಕೃಷಿಯೇತರ ಉದ್ದೇಶಗಳಿಗೆ ಕಲಂ 63 ರಲ್ಲಿ ನಿಗದಿಪಡಿಸಿರುವ ಗರಿಷ್ಠ ಮಿತಿಗಿಂತ ಹೆಚ್ಚಿನ ಜಮೀನನ್ನು ಖರೀದಿಸಬೇಕಾದಲ್ಲಿ ಮತ್ತು 80ರಂತೆ ಎ-ವರ್ಗದ ನೀರಾವರಿ ಜಮೀನನ್ನು ಕೃಷಿಯೇತರ ಉದ್ದೇಶಕ್ಕೆ ಬಳಸಬೇಕಾದಲ್ಲಿ ಕಡ್ಡಾಯವಾಗಿ ಕಲಂ 109ರಡಿ ಅನುಮತಿ ಪಡೆಯತಕ್ಕದ್ದು.

ಅಲ್ಲದೆ, ವ್ಯಕ್ತಿ/ಕುಟುಂಬ, ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳು ಕಲಂ 63ರಡಿ ನಿಗದಿಪಡಿಸಿರುವ ಗರಿಷ್ಠ ಮಿತಿ ಒಳಗಿದ್ದಲ್ಲಿ ಹಾಗೂ ಎ-ವರ್ಗದ ನೀರಾವರಿ ಜಮೀನು ಅಲ್ಲದಿದ್ದಲ್ಲಿ ಅಂತಹ ಜಮೀನುಗಳನ್ನು ಖರೀದಿಸಲು ಕಲಂ 109 ರಡಿ ಅನುಮತಿ ಪಡೆಯುವ ಅಗತ್ಯವಿರುವುದಿಲ್ಲ ಹಾಗೂ ಇಂತಹ ಪ್ರಕರಣಗಳಲ್ಲಿ ಖರೀದಿದಾರರು ಕಲಂ 63 ಹಾಗೂ ಕಲಂ 80 ಉಲ್ಲಂಘನೆಯಾಗಿರುವುದಿಲ್ಲವೆಂದು ಪ್ರಮಾಣ

....2

ಪತ್ರ ಸಲ್ಲಿಸತಕ್ಕದ್ದು. ಈ ರೀತಿ ಖರೀದಿಸಲಾದ ಜಮೀನನ್ನು ಖಾತೆ ಮಾಡುವಾಗ ರಾಜಸ್ವ ನಿರೀಕ್ಷಕರು ಹಾಗೂ ಗ್ರಾಮ ಲೆಕ್ಕಿಗರು ಕರ್ನಾಟಕ ಭೂ ಸುಧಾರಣಾ ಕಾಯ್ದೆ, 1961ರ ಕಲಂ 63 ಮತ್ತು ಕಲಂ 80ರ ಮಾನದಂಡಗಳ ಉಲ್ಲಂಘನೆಯ ಬಗ್ಗೆ ಪರಿಶೀಲಿಸಿ ಖಾತೆಯನ್ನು ಅಂಗೀಕರಿಸಬೇಕು. ಒಂದು ವೇಳೆ ತಪ್ಪಾಗಿ ಪ್ರಮಾಣ ಪತ್ರ ಸಲ್ಲಿಸಿದ್ದಲ್ಲಿ, ಕಂದಾಯ ಅಧಿಕಾರಿಗಳು ಅಂತಹ ಪ್ರಕರಣಗಳಲ್ಲಿ ನೋಂದಣಿಯಾದ ದಾಸ್ತಾವೇಜನ್ನು ಅಸಿಂಧು ಎಂದು ಆದೇಶಿಸಿ, ಅಂತಹ ಆದೇಶವನ್ನು ಸಂಬಂಧಿಸಿದ ಉಪ ನೋಂದಣಾಧಿಕಾರಿಗಳಿಗೆ ಕಳುಹಿಸಿ, ಅದರಂತೆ ಉಪ ನೋಂದಣಾಧಿಕಾರಿಗಳು ಕರ್ನಾಟಕ ನೋಂದಣಿ ನಿಯಮಗಳು, 1965ರ ನಿಯಮ 123ರಡಿ ರದ್ದಾದ ಆದೇಶವನ್ನು ನಮೂದಿಸಲು ಕ್ರಮವಹಿಸತಕ್ಕದ್ದು.

ವ್ಯಕ್ತಿ/ಕುಟುಂಬ, ಸಂಘ-ಸಂಸ್ಥೆಗಳು ಹಾಗೂ ಕೈಗಾರಿಕಾ ಸಂಸ್ಥೆಗಳು ಕರ್ನಾಟಕ ಭೂ ಸುಧಾರಣೆ ಕಾಯ್ದೆ, 1961ರ ಕಲಂ 80ರಂತೆ ಎ-ವರ್ಗದ ನೀರಾವರಿ ಜಮೀನು ಒಳಗೊಂಡಿಲ್ಲದಿದ್ದಲ್ಲಿ ಮತ್ತು ಕಲಂ 63ರಂತೆ ಗರಿಷ್ಠ ಮಿತಿಯೊಳಗೆ ಇದ್ದಲ್ಲಿ ಹಾಗೂ ಕೃಷಿಯೇತರ ಉದ್ದೇಶ ಹೊಂದಿದ್ದರೂ ಸಹ ಕೃಷಿ ಜಮೀನನ್ನು ಖರೀದಿಸಿ ನೋಂದಣಿ ಮಾಡಿಕೊಳ್ಳಲು ಯಾವುದೇ ನಿರ್ಬಂಧವಿರುವುದಿಲ್ಲ. ಆದರೆ ಇಂತಹ ಖರೀದಿದಾರರು ಕೃಷಿ ಜಮೀನನ್ನು ಯಾವ ಕೃಷಿಯೇತರ ಉದ್ದೇಶಕ್ಕೆ ಖರೀದಿಸಿರುತ್ತಾರೋ ಅಂತಹ ಕೃಷಿ ಜಮೀನನ್ನು ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ರಡಿ ಭೂ ಪರಿವರ್ತನೆ ಮಾಡಿಕೊಳ್ಳತಕ್ಕದ್ದು. ಕೃಷಿಯೇತರ ಉದ್ದೇಶ ಹೊಂದಿದ್ದರೂ ಸಹ ಭೂ ಪರಿವರ್ತನೆ ಮಾಡಿಕೊಳ್ಳದಿದ್ದಲ್ಲಿ ಅಂತಹ ಜಮೀನು ಕೃಷಿ ಜಮೀನಾಗಿಯೇ ಮುಂದುವರೆಯುವುದು. ಒಂದು ವೇಳೆ ಕರ್ನಾಟಕ ಭೂ ಕಂದಾಯ ಕಾಯ್ದೆ, 1964ರ ಕಲಂ 95ರಡಿ ಭೂ ಪರಿವರ್ತನೆಯಾಗದಿದ್ದಲ್ಲಿ ಅದೇ ಕಾಯ್ದೆಯ ಕಲಂ 96ರಡಿ ಜಿಲ್ಲಾಧಿಕಾರಿಗಳು ಕ್ರಮವಹಿಸತಕ್ಕದ್ದು.

11/1/22

(ಹೆಚ್.ಎಂ.ಸುದರ್ಶನ್)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಭೂ-ಸುಧಾರಣೆ)

ಇವರಿಗೆ:

1. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
2. ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು.
3. ಎಲ್ಲಾ ಜಿಲ್ಲಾಧಿಕಾರಿಗಳು.
4. ಎಲ್ಲಾ ಉಪ ವಿಭಾಗಾಧಿಕಾರಿಗಳು [ಜಿಲ್ಲಾಧಿಕಾರಿಗಳ ಮುಖಾಂತರ]
5. ಎಲ್ಲಾ ತಹಶೀಲ್ದಾರರು [ಜಿಲ್ಲಾಧಿಕಾರಿಗಳ ಮುಖಾಂತರ]
6. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು

ಪ್ರತಿ ಮಾಹಿತಿಗಾಗಿ:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ಕಂದಾಯ ಇಲಾಖೆ.
2. ಸರ್ಕಾರದ ಉಪ ಕಾರ್ಯದರ್ಶಿಗಳ ಪತ್ರಾಂಕಿತ ಆಪ್ತ ಸಹಾಯಕರು, ಕಂದಾಯ ಇಲಾಖೆ [ಭೂ ಮಂಜೂರಾತಿ ಮತ್ತು ಭೂ ಸುಧಾರಣೆ]